**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 230/2017 ಸಿ.ಡಬ್ಲ್ಯೂ –4 ಪಿ.ಡಬ್ಲ್ಯೂ -3

| | | |
|---|---|---|
| ಹೆಸರು | ಃ | ಮಲ್ಲಮ್ಮ |
| ತಂದೆಃ ಗಂಡ | ಃ | ದೇವಿಂದ್ರ |
| ವಯಸ್ಸು | ಃ | ೫೦ ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | ಃ | ಬಂಗರಗಾ |

ದಿನಾಂಕಃ೨೯.೦೪.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ನಂ.೧ ನನ್ನ ಅಳಿಯ. ಆರೋಪಿ ನಂ.೨ ಮತ್ತು ೩ ನನ್ನ ಮಗಳ ಅತ್ತೆ, ಮಾವ. ಚಾಸಾ-1 ನನ್ನ ಮಗಳು, ಚಾಸಾ-5 ನನ್ನ ಗಂಡ, ಚಾಸಾ-6 ನನ್ನ ನೆಗೆಣಿ, ಚಾಸಾ-2, 3, 7 ರಿಂದ 12 ರವರ ಪರಿಚಯ ಇರುತ್ತದೆ.

ನನ್ನ ಮಗಳು ಹೆರಿಗೆಗೆಂದು ತವರು ಮನೆಗೆ ಬಂದಾಗ ಆರೋಪಿತರು ನಮ್ಮ ಮನೆಗೆ ಬಂದು ಚಾಸಾ-೧ ರವರ ತಲೆಗೆ ರಾಡಿನಿಂದ ಹೊಡೆದಿರುತ್ತಾರೆ. ಆಗ ಚಾಸಾ-೧ ರವರು ಮೂರ್ಚೆ ತಪ್ಪಿ ಬಿದ್ದಿರುತ್ತಾರೆ. ಅಲ್ಲಿ ನೆರೆದಿರುವ ಜನರು ಜಗಳ ಬಿಡಿಸಿರುತ್ತಾರೆ. ನಂತರ ನಾವು ಆಗಿಂದಾಗಲೆ ಚಾಸಾ-೧ ರವರನ್ನು ಪಿ.ಜಿ. ಶಹಾ ಆಸ್ಪತ್ರೆಗೆ ದಾಖಲು ಮಾಡಿದೆವು. ಆರೋಪಿತರು ನನ್ನ ಮಗಳಿಗೆ ನೀನು ಚೆನ್ನಾಗಿಲ್ಲ, ಕಪ್ಪು ಇದ್ದೀಯಾ ಎಂದು ನನ್ನ ಮಗಳಿಗೆ ಕಿರಿಕಿರಿ ಮಾಡುತ್ತಿದ್ದರು, ಮತ್ತು ವರದಕ್ಷಿಣೆ, ಬಂಗಾರ ಮತ್ತು ಗಾಡಿ ತೆಗೆದುಕೊಂಡು ಬಾ ಎಂಥು ಕಿರುಕುಳ ನೀಡುತ್ತಿದ್ದರು. ಮತ್ತು ಚಾಸಾ-೧ ರವರಿಗೆ ಆರೋಪಿ ನಂ.೧ ಕುಡಿದು ಬಂದು ರಾಡಿನಿಂದ ಹೊಡೆ ಬಡೆ ಮಾಡಿರುತ್ತಾರೆ. ಚಾಸಾ-೧ ರವರ ಹೆರಿಗೆ ಆದರೂ ಮಗುವನ್ನು ನೋಡಲು ಬಂದಿರುವುದಿಲ್ಲ. ಆರೋಪಿತನು ರಂಡಿ ಬೋಸಡಿ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿರುತ್ತಾನೆ. ನಮ್ಮ ಊರಿಗೆ ಬಂದರೆ ನಿನ್ನ ಜೀವ ಹೊಡೆಯುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಚಾಸಾ-೧ ರವರಿಗೆ ಆರೋಪಿ ನಂ.೧ ಎಲ್ಲಾ ಬಟ್ಟೆಗಳನ್ನು ಕಳೆದು ಹೊರಗಡೆ ಕೂಡಿಸುವುದು ಮಾಡುತ್ತಿದ್ದನು, ಈ ರೀತಿ ಮಾಡಿದರೂ ಆರೋಪಿ ನಂ.೨ ಮತ್ತು ೩ ರವರು ಆರೋಪಿ ನಂ.೧ ರವರಿಗೆ ಹೇಳುತ್ತಿರಲಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು)

**ಪಾಟೀ ಸವಾಲು ಸಸಅ ರವರಿಂದಃ**

ಚಾಸಾ-೧ ರವರನ್ನು ಆರೋಪಿ ನಂ.೧ ರವರ ಜೊತೆ ಸಾವಳೇಶ್ವರ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಅಲ್ಲಿ ಚಾಸಾ-೧ ರವರು ಒಂದು ವರ್ಷ ಚೆನ್ನಾಗಿದ್ದಳು ಎಂಧರೆ ಸರಿ. ನಾನು, ಚಾಸಾ-೫, ಚಾಸಾ-೭ ಮತ್ತು ೮ ರವರು ಸೇರಿ ಪಂಚಾಯತಿ ಮಾಡಿ ಆರೋಪಿತರಿಗೆ

ಸರಿಯಾಗಿ ನಡೆಸಿಕೊ ಎಂದು ಹೇಳಿದೆವು ಎಂದರೆ ಸರಿ. ಆರೋಪಿ ನಂ.೧ ಚಾಸಾ-೧ ರವರಿಗೆ ಮೋಟರ್ ಸೈಕಲ್ ತೆಗೆದುಕೊಳ್ಳಲು ನಿಮ್ಮ ತಂದೆಯಿಂದ ಹಣ ತೆಗೆದುಕೊಂಡು ಬಾ ಎಂದು ಕಿರುಕುಳ ನೀಡುತ್ತಿದ್ದನು ಎಂಥರೆ ಸರಿ. ಈ ರೀತಿ ಕಿರುಕುಳ ಚಾಸಾ-೧ ಸಹಿಸಿಕೊಂಡು ಜೀವನ ನಡೆಸಿರುತ್ತಾಳೆ ಎಂಥರೆ ಸರಿ. ಸಹಿಸಿಕೊಂಡು ನಂತರ ಹೆರಿಗೆಗೆಂದು ಚಾಸಾ-೧ ತನ್ನ ತವರು ಮನೆಗೆ ಬಂದಿರುತ್ತಾಳೆ ಎಂಥರೆ ಸರಿ. ಹೆರಿಗೆ ನಂತರ ಆರೋಪಿತರು ಯಾರೂ ಮಗುವನ್ನು ನೋಡಲು ಬಂದಿರುವುದಿಲ್ಲ ಎಂಥರೆ ಸರಿ.

ದಿ.09.09.2016 ರಂದು ಆರೋಪಿ ನಂ.೧ ನಮ್ಮ ಮನೆಗೆ ಸರಾಯಿ ಕುಡಿದು ಬಂದು ಚಾಸಾ-೧ ರವರಿಗೆ ಮೋಟರ್ ಸೈಕಲ್ ತೆಗೆದುಕೊಳ್ಳಲು ಹಣ ಕೊಡಿಸುತ್ತೀನೆಂದು ಹೇಳಿದ್ದಿ, ಇನ್ನೂ ಕೊಡಿಸಿರುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು ಅಲ್ಲೇ ಬಿದ್ದಿದ್ದ ರಾಡಿನಿಂದ ತಲೆಗೆ ಹೊಡೆದನು ಎಂಥರೆ ಸರಿ. ರಾಡಿನಿಂದ ಕೈ ಬೆರಳಿಗೆ ಹೊಡೆದನು, ಕೈ ಮುರಿದಿರುತ್ತದೆ ಎಂದರೆ ಸರಿ. ಚಾಸಾ-೧ ರವರನ್ನು ನೆಲಕ್ಕೆ ಕೆಡವಿ ರಾಡಿನಿಂದ ಕಾಲಿಗೆ ಹೊಡೆದಿರುತ್ತಾನೆ ಎಂದರೆ ಸರಿ. ಸದರಿ ಜಗಳದ ಬಾಯಿಯನ್ನು ಕೇಳಿ ಚಾಸಾ-6 ರವರು ಬಿಡಿಸಲು ಮುಂದಾದಾಗ ಆರೋಪಿ ನಂ.೧ ಅವಳಿಗೂ ಬೆನ್ನಿನ ಮೇಲೆ ಹೊಡೆದನು ಎಂಥರೆ ಸರಿ. ನಾನು, ಚಾಸಾ-5, 6, ಚಾಸಾ-11, 12 ಜಗಳ ಬಿಡಿಸಿದೆವು ಎಂದರೆ ಸರಿ. ಆರೋಪಿ ನಂ.೧ ಚಾಸಾ-೧ ರವರಿಗೆ ನೀನು ನಮ್ಮ ಮನೆಗೆ ಬಂದರೆ ಖಲಾಸ ಮಾಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂಥರೆ ಸರಿ. ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂಥರೆ ಸರಿ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ.-೧ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎ.ಡಿ. ವಕೀಲರಿಂದ</u>**

ಆರೋಪಿ ನಂ.೧ ರಾಡಿನಿಂದ ಚಾಸಾ-೧ ರವರಿಗೆ ಹೊಡೆದನು ಎಂದು ಹೇಳುತ್ತೀರಲ್ಲಾ, ಆ ಸಮಯದಲ್ಲಿ ಆರೋಪಿ ನಂ.೨ ಮತ್ತು ೩ ಇರಲಿಲ್ಲ ಎಂದರೆ ಸರಿ. ಚಾಸಾ-೧ ರವರ ಮದುವೆ ಆಗಿ ಈಗ ಸುಮಾರು ೮-೯ ವರ್ಷ ಆಗಿರುತ್ತದೆ. ಮದುವೆ ನಂತರ ಚಾಸಾ-೧ ತನ್ನ ಗಂಡನ ಮನೆಯಲ್ಲಿ ಒಂದು ವರ್ಷ ಇದ್ದು ಬಾಳ್ವೆ ಮಾಡಿರುತ್ತಾಳೆ. ಆ ಸಮಯದಲ್ಲಿ ಮುಂಬೈಯ ರಾಬಡ ಏರಿಯಾದಲ್ಲಿ ಇದ್ದಳು. ಚಾಸಾ-೧ ಮದುವೆ ಆದ ಒಂದು ವರ್ಷಕ್ಕೆ ಗರ್ಭಿಣಿ ಆಗಿರುತ್ತಾಳೆ. ಗರ್ಭಿಣಿ ಆದ ನಂತರ ಕುಬುಸ ಮಾಡಲು ನಾವು ಮುಂಬೈಗೆ ಹೋಗಿರುತ್ತೇವೆ. ಗರ್ಭಿಣಿ ಆದ ಏಳು ತಿಂಗಳ ನಂತರ ಹೆರಿಗೆಗೆಂದು ಚಾಸಾ-೧ ರವರನ್ನು ತವರು ಮನೆಗೆ ಕರೆದುಕೊಂಡು ಬಂದೆವು. ಚಾಸಾ-೧ ರವರು ಹೆರಿಗೆಯು ಗೌರಾ ಆಸ್ಪತ್ರೆಯಲ್ಲಿ ಆಗಿರುತ್ತದೆ. ಹೆರಿಗೆಯ ವಿಷಯವನ್ನು ಮತ್ತು ಮಗುವಿನ ವಿಷಯವನ್ನು ಆರೋಪಿತರಿಗೆ ತಿಳಿಸಿರುತ್ತೇವೆ. ಹೆರಿಗೆ ಆದ ಒಂದು ತಿಂಗಳಿಗೆ ಚಾಸಾ-೧ ರವರನ್ನು ಮನೆಗೆ ಕರೆದುಕೊಂಡು ಬಂದೆವು. ಆಸ್ಪತ್ರೆಯಲ್ಲಿ ಇದ್ದಾಗ ಆರೋಪಿತರು ಬಂದು ಚಾಸಾ-೧ ಮತ್ತು ಮಗುವನ್ನು ನೋಡಿಕೊಂಡು ಹೋಗಿರುತ್ತಾರೆ ಎಂದರೆ ಸರಿ ಅಲ್ಲ.

ನೀವು, ಚಾಸಾ-5 7 ಮತ್ತು 8 ರವರು ಪಂಚಾಯತಿ ಮಾಡುರುತ್ತೀರಿ ಎಂಥು ಹೇಳುತ್ತೀರಲ್ಲ, ಅದನ್ನು ಮದುವೆ ಆದ ಎಷ್ಟು ವರ್ಷಕ್ಕೆ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಒಂದು ವರ್ಷಕ್ಕೆ ಬಂಗರಗಾ ಗ್ರಾಮದಲ್ಲಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಪಂಚಾಯತಿ ಮಾಡಿದ ನಂತರ ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂದು ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ಪೋಲಿಸರಿಗೆ ನಾನು ಹೇಳಿಕೆಯನ್ನು ಬಂಗರಗಾ ಗ್ರಾಮದಲ್ಲಿ ನೀಡಿರುತ್ತೇನೆ. ನಾನು ನನ್ನ ಹೇಳಿಕೆಯಲ್ಲಿ

ನಾನು ಚಾಸಾ-5, 7 ಮತ್ತು 8 ರವರು ಆರೋಪಿತರ ಊರಿಗೆ ಹೋಗಿ ಆರೋಪಿತರಿಗೆ ಸರಿಯಾಗಿ ಚಾಸಾ-೧ರವರನ್ನು ನಡೆಸಿಕೊಳ್ಳಿ ಎಂದು ಬುದ್ಧಿವಾದವನ್ನು ತಿಳಿಸಿ ಹೇಳಿ ಬಂದಿರುತ್ತೇವೆ ಎಂದು ನಾನು ನನ್ನ ಹೇಳಿಕೆಯನ್ನು ನೀಡಿರುವುದಿಲ್ಲ. ಮೊದಲೇನಾದರೂ ಚಾಸಾ-೧ ರವರಿಗೆ ಕಿರುಕುಳ ಕೊಟ್ಟ ಬಗ್ಗೆ ಪೋಲಿಸರಿಗೆ ಫಿರ್ಯಾದಿ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿ ನಂ.೧ ಸಾಕಷ್ಟು ಸಲ ಚಾಸಾ-೧ ರವರನ್ನು ಕರೆಯಲು ಹೋದಾಗ ನಾವೇ ಅವಳನ್ನು ಕಳಿಸಿರುವುದಿಲ್ಲ ಎಂದರೆ ಸರಿ ಅಲ್ಲ. ಚಾಸಾ-೧ ರರಿಗೆ ಆರೋಪಿತರು ಹೊಡೆ ಬಡೆ ಮಾಡುತ್ತಿದ್ದರು, ಕಿರುಕುಳ ನೀಡುತ್ತಿದ್ದರು, ವರದಕ್ಷಿಣೆ, ಮೋಟರ್ ಸೈಕಲ್, ಬಂಗಾರ ತೆಗೆದುಕೊಂಡು ಬಾ ಎಂದು ಹೇಳುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ನಾನು ನನ್ನ ಹೇಳಿಕೆಯಲ್ಲಿ ಆರೋಪಿ ನಂ.೧ ಚಾಸಾ-೧ ರವರ ಎಲ್ಲಾ ಬಟ್ಟೆಗಳನ್ನು ತೆಗೆದು ಹೊರಗಡೆ ಕೂಡಿಸುತ್ತಿದ್ದನು ಎಂದು ಹೇಳಿಕೆ ನೀಡಿರುವುದಿಲ್ಲ ಎಂಧರೆ ಸರಿ. ಚಾಸಾ-೧ ರವರಿಗೆ ಆರೋಪಿತರು ಯಾವತ್ತಿಗೂ ವರದಕ್ಷಿಣೆ, ಕಿರುಕುಳ ಕೊಟ್ಟಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ರಾಡಿನಿಂದ ಹೊಡೆದಿರುವುದಿಲ್ಲ ಮನೆ ಬಿಟ್ಟು ಹೊರ ಹಾಕಿರುವುದಿಲ್ಲ ಎಂಧರೆ ಸರಿ ಅಲ್ಲ.

ದಿ.09.09.2016 ರಂದು ಆರೋಪಿ ನಂ.೧ ನಮ್ಮ ಮನೆಗೆ ಸರಾಯಿ ಕುಡಿದು ಬಂದು ಚಾಸಾ-೧ ರವರಿಗೆ ಮೋಟರ್ ಸೈಕಲ್ ತೆಗೆದುಕೊಳ್ಳಲು ಹಣ ಕೊಡಿಸುತ್ತೀನೆಂದು ಹೇಳಿದ್ದಿ, ಇನ್ನೂ ಕೊಡಿಸಿರುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು ಅಲ್ಲೇ ಬಿದ್ದಿದ್ದ ರಾಡಿನಿಂದ ತಲೆಗೆ ಹೊಡೆದನು ಮತ್ತು ಅದೇ ರಾಡಿನಿಂದ ಕಾಲಿಗೆ, ಮತ್ತು ಕೈ ಬೆರಳಿಗೆ ಹೊಡೆದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಚಾಸಾ-6 ರವರು ಬಿಡಿಸಲು ಬಂದಾಗ ಆರೋಪಿ ನಂ.೧ ಅವರ ಬೆನ್ನಿಗೂ ಸಹ ಹೊಡೆದನು ಎಂಧು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೧ ಚಾಸಾ-೧ ರವರಿಗೆ ಜೀವ ಬೆದರಿಕೆ ಹಾಕಿದನು ಎಂಧು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಘಟನೆಯು ಸುಮಾರು ಒಂದು ಗಂಟೆವರೆಗೆ ಆಗಿರುತ್ತದೆ. ಚಾಸಾ-೧ ರವರಿಗೆ ರಕ್ತಗಾಯವಾಗಿರುತ್ತದೆ. ರಕ್ತ ಚಾಸಾ-೧ ರವರ ಬಟ್ಟೆ ಮೇಲೆ ಬಿದ್ದಿತ್ತು. ರಕ್ತ ಹತ್ತಿದ್ದ ಬಟ್ಟೆಯನ್ನು ಪೋಲಿಸರು ಜಪ್ತಿಪಡಿಸಿಕೊಂಡಿರುವುದಿಲ್ಲ. ರಾಡಿಗೂ ಸಹ ಕೂಡ ರಕ್ತ ಹತ್ತಿತ್ತು. ಮು.ಮಾ.-೧ ಸದರಿ ರಾಡ ಅಲ್ಲ ಏಕೆಂದರೆ ಅದಕ್ಕೆ ರಕ್ತ ಹತ್ತಿರುವುದಿಲ್ಲ ಎಂಧರೆ ಸರಿ ಅಲ್ಲ. ಚಾಸಾ-೧ ರವರಿಗೆ ಮೂರ್ಚೆ ಕಲಬುರಗಿ ಆಸ್ಪತ್ರೆಗೆ ಹೋಗಿಂದ 2-3 ದಿನಗಳ ನಂತರ ಬಂದಿರುತ್ತದೆ. ನಾನು ನನ್ನ ಹೇಳಿಕೆಯಲ್ಲಿ ಚಾಸಾ-೧ ರವರಿಗೆ ಮೂರ್ಚೆ ತಪ್ಪಿತ್ತು ಎಂದು ಹೇಳಿರುವುದಿಲ್ಲ ಎಂಧರೆ ಸರಿ. ಯಾವುದೇ ಘಟನೆ ನಡೆಯದಿದ್ದರೂ ಆರೋಪಿತರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ